# **ಪತ್ರಿಕಾ ಪ್ರಕಟಣೆ**

ಸಾರ್ವಜನಿಕ ಶಿಕ್ಷಣ ಇಲಾಖೆಯ 2015ನೇ ಸಾಲಿನ, ಮೈಸೂರು ವಿಭಾಗದೊಳಗಿನ ಪ್ರೌಢಶಾಲಾ ಶಿಕ್ಷಕರ ಘಟಕದೊಳಗಿನ ಪರಸ್ಪರ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿ ಯನ್ನು ದಿನಾಂಕ 05-08-2015 **ರಂದು** ಇಲಾಖೆಯ ವೆಬ್‌ಸೈಟ್‌ನಲ್ಲಿ (www.schooleducation.kar.nic.in) ಪ್ರಕಟಿಸಲಾಗಿದೆ. ಪರಸ್ಪರ ವರ್ಗಾವಣೆಯ ಅಂತಿಮ ಆದ್ಯತಾ ಪಟ್ಟಿಯಲ್ಲಿರುವ ಶಿಕ್ಷಕ ವೃಂದದವರಿಗೆ ದಿನಾಂಕ **10-08-2015ರಂದು** ಕೌನ್ಸಿಲಿಂಗ್ ಇದ್ದು, ಕೌನ್ಸಿಲಿಂಗ್‌ಗೆ ಹಾಜರಾಗುವ ಶಿಕ್ಷಕರ ವೃಂದದವರು **ಇತ್ತೀಚಿನ ಭಾವಚಿತ್ರ ಲಗತ್ತಿಸಿರುವ ಸೇವಾ ದೃಢೀಕರಣ ಪತ್ರ ಹಾಗೂ ತಮ್ಮ ಸೇವಾ ಅವಧಿಯಲ್ಲಿ ಪರಸ್ಪರ ವರ್ಗಾವಣೆಯು ಎಷ್ಟನೇ ಬಾರಿ ಎಂಬುದರ ಬಗ್ಗೆ ಸಂಬಂಧಿಸಿದ ಮುಖ್ಯ ಶಿಕ್ಷಕರಿಂದ ದೃಢೀಕರಿಸಿ, ಬಿ.ಇ.ಒ. ರವರ ಮೇಲು ಸಹಿಯೊಂದಿಗೆ** ಕೌನ್ಸಿಲಿಂಗ್‌ಗೆ ಹಾಜರ್ಪಡಿಸುವಂತೆ ಸಾರ್ವಜನಿಕ ಶಿಕ್ಷಣ ಇಲಾಖೆಯ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಜಂಟಿನಿರ್ದೇಶಕರು (ಹೆ.ಪ್ರ.) ಶ್ರೀ ಬಿ.ಕೆ. ಬಸವರಾಜ ಇವರು ತಿಳಿಸಿರುತ್ತಾರೆ.

ಸಹಿ/-
(ಬಿ.ಕೆ. ಬಸವರಾಜ)
ವಿಭಾಗೀಯ ಕಾರ್ಯದರ್ಶಿಗಳು ಹಾಗೂ
ಪದನಿಮಿತ್ತ ಜಂಟಿನಿರ್ದೇಶಕರು,(ಹೆ.ಪ್ರ.)
ಸಾರ್ವಜನಿಕ ಶಿಕ್ಷಣ ಇಲಾಖೆ,
ಮೈಸೂರು ವಿಭಾಗ, ಮೈಸೂರು.